ಈ ಯೋಜನೆಗೆ ಈ ಕೆಳಕಂಡ ಮೂಲಗಳಿಂದ ಅಂದಾಜು ವೆಚ್ಚವನ್ನು ಭರಿಸಲಾಗುವುದು

1) ಕೇಂದ್ರ ಸರ್ಕಾರದಿಂದ–ರೂ 675 20 ಲಕ್ಷ ಅನುದಾನ (80%)

2) ಕರ್ನಾಟಕ ಸರ್ಕಾರದಿಂದ – ರೂ 84 40ಲಕ್ಷ ಅನುದಾನ (10%)

3) ಸ್ಥಳೀಯ ಸಂಸ್ಥೆಯ ವಂತಿಗೆ (10%) ರೂ 84 40 ಲಕ್ಷ

ಒಟ್ಟು ರೂ 844 00ಲಕ್ಷ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1162(1528)**

ಮಾನ್ಯ ಸದಸ್ಯರ ಹೆಸರು **ಶ್ರೀ ಶಿವಾನಂದ ಎಸ್ ಪಾಟೀಲ್ ಬಸವನಬಾಗೇವಾಡಿ)**

ಉತ್ತರಿಸುವ ಸಚಿವರು **ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)**

ಅ) ರಾಜ್ಯದಲ್ಲಿರುವ ರಾಜ್ಯ ಹೆದ್ದಾರಿಗಳಿಗೆ ಆಧ್ಯತೆ ನೀಡಿ ಅಭಿವೃದ್ಧಿ ಪಡಿಸಲು ಮತ್ತು ಪುನರ್ ವ್ಯವಸ್ಥೆ ಗೊಳಿಸಲು ಯಾವ ಮಾರ್ಗ ಸೂಚಿಗಳನ್ವಯ ಕ್ರಮ ಕೈಗೊಳ್ಳಲಾಗಿದೆ,

ರಾಜ್ಯದಲ್ಲಿರುವ ರಾಜ್ಯ ಹೆದ್ದಾರಿಗಳಿಗೆ ಆಧ್ಯತೆ ನೀಡಿ ಅಬಿವೃದ್ಧಿಪಡಿಸಲು ಮತ್ತು ಪುನರ್ ವ್ಯವಸ್ಥೆಗೊಳಿಸಲು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವನ್ನು ಸ್ಥಾಪಿಸಲಾಗಿದ್ದು, ಕಾಮಗಾರಿಗಳ ಅವಶ್ಯಕತೆ ಹಾಗೂ ಅನುದಾನದ ಲಭ್ಯತೆಗನುಸಾರವಾಗಿ ಕ್ರಮಕೈಗೊಳ್ಳಲಾಗಿದೆ

ಆ) ಮಾರ್ಗಸೂಚಿಗಳನ್ವಯ ಆದ್ಯತಾ ಪಟ್ಟಿಯಲ್ಲಿ ಮನಗೂಳಿ–ಬಿಜ್ಜಳ ರಾಜ್ಯ ಹೆದ್ದಾರಿ ಯಾವ ಕ್ರಮಾಂಕದಲ್ಲಿದೆ,

ಸದರಿ ಕಾಮಗಾರಿಯ ಅಭಿವೃದ್ಧಿ ಕಾರ್ಯವನ್ನು ಅನುದಾನದ ಲಭ್ಯತೆಗನುಸಾರವಾಗಿ ಕ್ರಮ ಕೈಗೊಳ್ಳಲಾಗುವುದು

ಇ) ಮಾರ್ಗ ಸೂಚಿಗಳನ್ವಯ ಆದ್ಯತಾ ಪಟ್ಟಿಯಲ್ಲಿರುವ (ಕ್ರಮವಾಗಿ) ರಾಜ್ಯ ಹೆದ್ದಾರಿಗಳು ಯಾವುವು,

ರಾಜ್ಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿಗಳನ್ನು ಮೇಲಿನಂತೆ ಅನುದನದ ಲಭ್ಯತೆಗನುಸಾರವಾಗಿ ಕ್ರಮ ಕೈಗೊಳ್ಳಲಾಗುವುದು

ಈ) ಇವೆಲ್ಲವುಗಳನ್ನು ಯಾವ ನಿರ್ಧಿಷ್ಟ ಕಾಲಮಿತಿ ಹಾಕಿಕೊಂಡು ಅಭಿವೃದ್ಧಿಪಡಿಸಲಾಗುವುದು?

ಕಾಮಗಾರಿಯ ಆಕಾರ, ಅವಶ್ಯಕತೆ ಹಾಗೂ ಅದರಲ್ಲಿ ಒಳಗೊಂಡ ಅಂಶಗಳ ಹಾಗೂ ಅನುದಾನದ ಲಭ್ಯತೆಯ ಪ್ರಕಾರ ಕಾಲಮಿತಿಯನ್ನು ನಿಗಧಿಪಡಿಸಲಾಗುವುದು